ಇಸ್ಲಾಮಿನಲ್ಲಿ ಬಡತನ ನಿವಾರಣೆ

ಇಸ್ಲಾಮಿನಲ್ಲಿ ಬಡತನವನ್ನು ವಿವಿಧ ವಿಧಾನಗಳಿಂದ ನಿವಾರಿಸಲಾಗುತ್ತದೆ.

1. **ಉದ್ಯೋಗ ಮತ್ತು ಸಂಪತ್ತು ಗಳಿಕೆಗೆ ಪ್ರೋತ್ಸಾಹ:** ಬಡತನವು ಹಲವು ಸಂದರ್ಭಗಳಲ್ಲಿ ಸಮಾಜಕ್ಕೆ ನಷ್ಟಕಾರಕವಾಗುತ್ತದೆ ಎಂದು ಇಸ್ಲಾಮ್ ಹೇಳುತ್ತದೆ. ಅದರಿಂದ ಸ್ಥಿರತೆ ಮತ್ತು ಶಾಂತಿ–ಸಮಾಧಾನವು ಅಳಿದು ಹೋಗುತ್ತದೆ. ಸಮಾಜದಲ್ಲಿ ಕ್ಷೋಭೆಯು ಹರಡುತ್ತದೆ. ಆದ್ದರಿಂದಲೇ ಇಸ್ಲಾಮ್ ಬಡತನ ನಿವಾರಣೆಗಾಗಿ ಝಕಾತ್ ನೀಡುವುದನ್ನು ಕಡ್ಡಾಯಗೊಳಿಸಿದೆ. ಅದನ್ನು ಫಕೀರನ ಹಕ್ಕು ಎಂದು ಹೇಳಲಾಗಿದೆ. ತನ್ನ ಈ ಹಕ್ಕನ್ನು ತೊರೆಯುವುದು ಫಕೀರನ ಮಟ್ಟಿಗೂ ಒಳ್ಳೆಯದಲ್ಲ. ಝಕಾತ್ ನೀಡುವುದರಿಂದ ಹಿಂದೆ ಸರಿಯುವುದು ಶ್ರೀಮಂತನ ಮಟ್ಟಿಗೂ ಅನುವದನೀಯವಲ್ಲ. ಬದಲಾಗಿ, ಯಾರಾದರೂ ಝಕಾತ್ ನೀಡುವುದರಿಂದ ನಿರಾಕರಿಸಿದರೆ, ಅವನನ್ನು ಶಿಕ್ಷಿಸಲಾಗುವುದು. ಪ್ರಥಮ ಖಲೀಫಾ ಅಬೂಬಕರ್‌ರವರು(ರ) ಝಕಾತ್ ನೀಡದವರ ವಿರುದ್ಧ ಯುದ್ಧ ಸಾರಿದ್ದರು.

2. **ಸಂಪತ್ತು ಅಲ್ಲಾಹನ ಸೊತ್ತಾಗಿದೆ:** ಇಸ್ಲಾಮ್ ಒಂದು ನೀತಿಯನ್ನು ಮಾಡಿದೆ. ಅದರ ಪ್ರಕಾರ, ಸಂಪತ್ತು ಅಲ್ಲಾಹನದ್ದಾಗಿದೆ ಮತ್ತು ವಾಸ್ತವದಲ್ಲಿ ಅದು ಶ್ರೀಮಂತರ ಸೊತ್ತಲ್ಲ; ಬದಲಾಗಿ ಅವರು ಅದರ ಸಂರಕ್ಷಕರಾಗಿದ್ದಾರೆ. ಈ ಸಂಪತ್ತು ಅವರ ಬಳಿ ಅಲ್ಲಾಹನ ಅಮಾನತ್ ಆಗಿದೆ. ದೇವಾಜ್ಞೆ ಹೇಳುತ್ತದೆ,

﴿وَأَنفِقُواْ مِمَّا جَعَلَكُم مُّسْتَخْلَفِينَ فِيهِۖ فَٱلَّذِينَ ءَامَنُواْ مِنكُمْ وَأَنفَقُواْ لَهُمْ أَجْرٞ كَبِيرٞ ٧﴾ الحديد: ٧

"ಅವನು ಯಾವ ವಸ್ತುಗಳ ಮೇಲೆ ನಿಮ್ಮನ್ನು ಪ್ರತಿನಿಧಿಯಾಗಿ ಮಾಡಿರುವನೋ ಅವುಗಳಿಂದ ಖರ್ಚು ಮಾಡಿರಿ." (ಪವಿತ್ರ ಕುರ್‌ಆನ್: 57: 7)

3. **ಕೆಲಸ ಮಾಡಲು ಶಕ್ತರಾಗಿರುವವರಿಗೆ ಉದ್ಯೋಗದ ಅವಕಾಶ ಒದಗಿಸಿ ಕೊಡಬೇಕು:** ಜನರಿಗೆ ಉದ್ಯೋಗದ ಅವಕಾಶಗಳನ್ನು ಒದಗಿಸಿ ಕೊಡುವುದು ಮುಸ್ಲಿಮ್ ಸರಕಾರದ ಹೊಣೆಗಾರಿಕೆಯಾಗಿದೆ. ಹದೀಸ್‌ನಲ್ಲಿ ಹೀಗೆ ಉಧೃತಗೊಂಡಿದೆ:

عنْ أَنَسِ بْنِ مَالِكٍ، أَنَّ رَجُلاً، مِنَ الأَنْصَارِ أَتَى النَّبِيَّ صلى الله عليه وسلم يَسْأَلُهُ فَقَالَ " أَمَا فِي بَيْتِكَ شَىْءٌ " . قَالَ بَلَى حِلْسٌ نَلْبَسُ بَعْضَهُ وَنَبْسُطُ بَعْضَهُ وَقَعْبٌ نَشْرَبُ فِيهِ مِنَ الْمَاءِ. قَالَ " ائْتِنِي بِهِمَا " . فَأَتَاهُ بِهِمَا فَأَخَذَهُمَا رَسُولُ اللَّهِ صلى الله عليه وسلم بِيَدِهِ وَقَالَ " مَنْ يَشْتَرِي هَذَيْنِ " . قَالَ رَجُلٌ أَنَا آخُذُهُمَا بِدِرْهَمٍ . قَالَ " مَنْ يَزِيدُ عَلَى دِرْهَمٍ " . مَرَّتَيْنِ أَوْ ثَلاَثًا قَالَ رَجُلٌ أَنَا آخُذُهُمَا بِدِرْهَمَيْنِ . فَأَعْطَاهُمَا إِيَّاهُ وَأَخَذَ الدِّرْهَمَيْنِ وَأَعْطَاهُمَا الأَنْصَارِيَّ وَقَالَ " اشْتَرِ بِأَحَدِهِمَا طَعَامًا فَانْبِذْهُ إِلَى أَهْلِكَ وَاشْتَرِ بِالآخَرِ قَدُومًا فَأْتِنِي بِهِ " . فَأَتَاهُ بِهِ فَشَدَّ فِيهِ رَسُولُ اللَّهِ صلى الله عليه وسلم عُودًا بِيَدِهِ ثُمَّ قَالَ لَهُ " اذْهَبْ فَاحْتَطِبْ وَبِعْ وَلاَ أَرَيَنَّكَ خَمْسَةَ عَشَرَ يَوْمًا " . فَذَهَبَ الرَّجُلُ يَحْتَطِبُ وَيَبِيعُ فَجَاءَ وَقَدْ أَصَابَ عَشَرَةَ دَرَاهِمَ فَاشْتَرَى بِبَعْضِهَا ثَوْبًا وَبِبَعْضِهَا طَعَامًا . فَقَالَ رَسُولُ اللَّهِ صلى الله عليه وسلم " هَذَا خَيْرٌ لَكَ مِنْ أَنْ تَجِيءَ الْمَسْأَلَةُ نُكْتَةً فِي وَجْهِكَ يَوْمَ الْقِيَامَةِ إِنَّ الْمَسْأَلَةَ لاَ تَصْلُحُ إِلاَّ لِثَلاَثَةٍ لِذِي فَقْرٍ مُدْقِعٍ أَوْ لِذِي غُرْمٍ مُفْظِعٍ أَوْ لِذِي دَمٍ مُوجِعٍ " . (أبو داوود، ترمذي ، ابن ماجه)

ಓರ್ವ ಅನ್ಸಾರಿಯು ಪ್ರವಾದಿವರ್ಯರ(ಸ) ಬಳಿ ಬೇಡಲು ಬಂದನು. ಪ್ರವಾದಿವರ್ಯರು(ಸ) ಅವನೊಡನೆ, "ನಿನ್ನ ಮನೆಯಲ್ಲಿ ಏನಾದರೂ ಇದೆಯೇ?" ಎಂದು ಕೇಳಿದರು. ಆತ ಹೇಳಿದ, "ಹೌದು ಯಾಕಿಲ್ಲ. ಒಂದು ಕಂಬಳಿ ಇದೆ. ಅದರ ಒಂದು ಭಾಗವನ್ನು ಹಾಸುತ್ತೇವೆ, ಇನ್ನೊಂದು ಭಾಗವನ್ನು ಹೊದ್ದುಕೊಳ್ಳುತ್ತೇವೆ ಹಾಗೂ ಒಂದು ನೀರಿನ ಲೋಟವಿದೆ. ಅದರಿಂದ ನಾವು ನೀರು ಕುಡಿಯುತ್ತೇವೆ." ಪ್ರವಾದಿವರ್ಯರೆಂದರು(ಸ), "ಆ ಎರಡೂ ವಸ್ತುಗಳನ್ನು ನನ್ನ ಬಳಿಗೆ ತಾ." ಆತ

www.uzairfalaki.com

ಹೋಗಿ, ತನ್ನ ಆ ಎರಡು ವಸ್ತುಗಳೊಂದಿಗೆ ಮರಳಿದ. ಪ್ರವಾದಿವರ್ಯರು(ಸ) ಅವೆರಡನ್ನೂ ಹಿಡಿದೆತ್ತಿ, “ಇವುಗಳನ್ನು ಯಾರು ಖರೀದಿಸುತ್ತಾರೆ?” ಎಂದು ಕೇಳಿದರು. ಓರ್ವ ವ್ಯಕ್ತಿಯು, “ನಾನು ಅದನ್ನು ಒಂದು ದಿರ್ಹಮ್‌ಗೆ ಖರೀದಿಸುತ್ತೇನೆ” ಎಂದನು. ಪ್ರವಾದಿವರ್ಯರು(ಸ), “ಒಂದು ದಿರ್ಹಮ್‌ಗಿಂತ ಹೆಚ್ಚು ಯಾರು ನೀಡುತ್ತಾರೆ?” ಎಂದು ಕೇಳಿದರು. (ಹೀಗೆ ಅವರು ಮೂರು ಬಾರಿ ಕೇಳಿದರು). ಇನ್ನೋರ್ವ ವ್ಯಕ್ತಿಯು, “ನಾನು ಅವುಗಳಿಗೆ ಎರಡು ದಿರ್ಹಮ್‌ಗಳನ್ನು ನೀಡುತ್ತೇನೆ” ಎಂದನು. ಪ್ರವಾದಿವರ್ಯರು(ಸ) ಅವುಗಳನ್ನು ಆತನಿಗೆ ಒಪ್ಪಿಸಿದರು ಮತ್ತು ಅವನಿಂದ ಎರಡು ದಿರ್ಹಮ್‌ಗಳನ್ನು ಪಡೆದು ಆ ವ್ಯಕ್ತಿಗೆ ನೀಡಿದರು. ತರುವಾಯ ಹೀಗೆಂದರು, “ಒಂದು ದಿರ್ಹಮ್‌ನಿಂದ ನಿನ್ನ ಮನೆಯವರಿಗೆ ಆಹಾರ ಖರೀದಿಸು. ಇನ್ನೊಂದು ದಿರ್ಹಮ್‌ನಿಂದ ಒಂದು ಕೊಡಲಿಯನ್ನು ಖರೀದಿಸಿ ನನ್ನ ಬಳಿಗೆ ತಾ.” ಆತ ಹೋಗಿ ಕೊಡಲಿಯನ್ನು ಪ್ರವಾದಿವರ್ಯರ(ಸ) ಬಳಿಗೆ ತಂದನು. ಪ್ರವಾದಿವರ್ಯರು(ಸ) ಸ್ವತಃ ಕಟ್ಟಿಗೆಯ ಒಂದು ತುಂಡನ್ನು ಅದಕ್ಕೆ ಸಿಕ್ಕಿಸಿದರು. ಬಳಿಕ ಹೇಳಿದರು, “ಹೋಗು, ಕಟ್ಟಿಗೆ ಕಡಿದು ತಂದು ಮಾರು ಮತ್ತು ಹದಿನೈದು ದಿನಗಳ ವರೆಗೆ ನನ್ನ ಮುಂದೆ ಬರಬೇಡ.” ಆತ ಹೊರಟು ಹೋದ ಮತ್ತು ಕಟ್ಟಿಗೆ ತುಂಡರಿಸಿ, ಅದನ್ನು ಮಾರತೊಡಗಿದ. ಕೆಲವು ದಿನಗಳ ಬಳಿಕ ಆತ ಮರಳಿದಾಗ ಅವನ ಬಳಿ ಹತ್ತು ದಿರ್ಹಮ್‌ಗಳಿದ್ದುವು. ಅವುಗಳಿಂದ ಒಂದಿಷ್ಟು ಬಟ್ಟೆಗಳನ್ನೂ ಆಹಾರ ಸಾಮಗ್ರಿಗಳನ್ನೂ ಖರೀದಿಸಿದ. ಪ್ರವಾದಿವರ್ಯರು(ಸ) ಹೇಳಿದರು, “ಪುನರುತ್ಥಾನ ದಿನದಂದು ನೀನು ಮುಖದಲ್ಲಿ ಕಲೆಯೊಂದಿಗೆ ಎಬ್ಬಿಸಲ್ಪಡುವುದಕ್ಕಿಂತ ಇದು ನಿನ್ನ ಪಾಲಿಗೆ ಉತ್ತಮವಾಗಿದೆ.” ತರುವಾಯ ಹೀಗೆಂದರು, “ಬೇಡುವುದು ಒಳ್ಳೆಯದಲ್ಲ. ಆದರೆ ಮೂರು ತರದ ಜನರ ಮಟ್ಟಿಗೆ ಅದು ಅನುವದನೀಯವಾಗಿದೆ. ಒಂದನೆಯವನು, ತೀರಾ ನಿರ್ಗತಿಕನಾಗಿರುವವನು. ಎರಡನೆಯವನು, ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವವನು. ಮೂರನೆಯವನು, ರಕ್ತಪರಿಹಾರವು ಕಡ್ಡಾಯವಾಗಿರುವ ಕೊಲೆಗಾರನಾಗಿದ್ದು, ಅವನ ಬಳಿ ಅದಕ್ಕೆ ನೀಡಲು ಏನೂ ಇಲ್ಲದಿದ್ದರೆ ಅವನು ಬೇಡಬಹುದಾಗಿದೆ.” (ಅಬೂದಾವೂದ್, ತಿರ್ಮಿದಿ, ಇಬ್ನು ಮಾಜಃ)

ಇಸ್ಲಾಮಿನಲ್ಲಿ ನಿರುದ್ಯೋಗದ ಕಲ್ಪನೆಯೇ ಇರುವುದಿಲ್ಲ. ಪ್ರವಾದಿವರ್ಯರು(ಸ) ಹೇಳುತ್ತಾರೆ,

" ما أكل أحد طعاماً قط خيراً من أن يأكل من عمل يده، وإن نبي الله داود صلى الله عليه وسلم كان يأكل من عمل يده". ((رواه البخاري)).

“ಸ್ವಂತ ಕರಗಳಿಂದ ದುಡಿದು ತಿನ್ನುವ ಆಹಾರಕ್ಕಿಂತ ಉತ್ತಮವಾದ ಆಹಾರವನ್ನು ಯಾರೂ ಉಂಡಿರಲಿಕ್ಕಿಲ್ಲ. ಪ್ರವಾದಿ ದಾವೂದ್‌ರು(ಅ) ತಮ್ಮ ಕೈಗಳಿಂದ ದುಡಿದು ತಿನ್ನುತ್ತಿದ್ದರು.” (ಬುಖಾರಿ) ಒಬ್ಬನು ಅರ್ಹವಾದ ಉದ್ಯೋಗ ಮಾಡಿ ಜೀವನಾಧಾರ ಗಳಿಸುತ್ತಿದ್ದರೆ, ಅಲ್ಲಾಹನು ಅವನಿಗೆ ಜಿಹಾದ್ ಮಾಡಿದಷ್ಟು ಪುಣ್ಯವನ್ನು ನೀಡುವನು. ಅಲ್ಲಾಹ್ ಹೇಳುತ್ತಾನೆ,

﴿ وَءَاخَرُونَ يَضْرِبُونَ فِي ٱلْأَرْضِ يَبْتَغُونَ مِن فَضْلِ ٱللَّهِ وَءَاخَرُونَ يُقَٰتِلُونَ فِي سَبِيلِ ٱللَّهِ ﴿٢٠﴾ ﴾ المزمل: ٢٠

“ಇನ್ನು ಕೆಲವರು ಅಲ್ಲಾಹನ ಅನುಗ್ರಹವನ್ನು ಅರಸಿಕೊಂಡು ಪ್ರಯಾಣದಲ್ಲಿರುತ್ತಾರೆ. ಮತ್ತೆ ಕೆಲವರು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡುತ್ತಾರೆ ಎಂದು ಅವನಿಗೆ ತಿಳಿದಿದೆ.” (ಪವಿತ್ರ ಕುರ್‌ಆನ್: 73: 20)

ಕೆಲಸ ಮಾಡಲು ಅಶಕ್ತರಾಗಿರುವವರಿಗೆ ಉದ್ಯೋಗವನ್ನು ಒದಗಿಸಲಾಗದಿದ್ದರೆ, ಅಗತ್ಯದ ಸಂದರ್ಭದಲ್ಲಿ ಅವರಿಗೆ ಸಹಾಯ ಮಾಡುವುದು ಇಸ್ಲಾಮೀ ಆಡಳಿತದ ಮೇಲೆ ಕಡ್ಡಾಯವಾಗಿದೆ.

www.uzairfalahi.com

4. **ದೇಶದಲ್ಲಿ ಕೆಲಸ ಮಾಡುವವರಿಗೆ ಸಂರಕ್ಷಣೆ ನೀಡುವುದು:** ದೇಶದಲ್ಲಿ ಕೆಲಸ ಮಾಡುವ ಜನರಿಗೆ ಸಂರಕ್ಷಣೆ ನೀಡುವುದು ಮುಸ್ಲಿಮ್ ಸರಕಾರದ ಮೇಲೆ ಕಡ್ಡಾಯವಾಗಿದೆ. ಅಲ್ಲಾಹನ ಸಂದೇಶವಾಹಕರು(ಸ) ಹೇಳುತ್ತಾರೆ,

" مَنْ كَانَ لَنَا عَامِلاً فَلْيَكْتَسِبْ زَوْجَةً فَإِنْ لَمْ يَكُنْ لَهُ خَادِمٌ فَلْيَكْتَسِبْ خَادِمًا فَإِنْ لَمْ يَكُنْ لَهُ مَسْكَنٌ فَلْيَكْتَسِبْ مَسْكَنًا " . قَالَ قَالَ أَبُو بَكْرٍ أُخْبِرْتُ أَنَّ النَّبِيَّ صلى الله عليه وسلم قَالَ " مَنِ اتَّخَذَ غَيْرَ ذَلِكَ فَهُوَ غَالٌّ أَوْ سَارِقٌ " . (ابو داوود)

“ನಮ್ಮ ವತಿಯಿಂದ ರಾಜ್ಯಪಾಲನಾಗಿ ನೇಮಕಗೊಂಡವನಿಗೆ ಪತ್ನಿ ಇಲ್ಲದಿದ್ದರೆ, ಅವನು ಮದುವೆಯಾಗಲಿ. ಸೇವಕರಿಲ್ಲದಿದ್ದರೆ, ಸೇವಕರನ್ನು ನೇಮಿಸಲಿ. ತನ್ನ ಹೊಣೆಗಾರಿಕೆ ಇರುವ ನಗರದಲ್ಲಿ ಅವನಿಗೆ ಮನೆ ಇಲ್ಲದಿದ್ದರೆ, ಮನೆಯನ್ನು ನಿರ್ಮಿಸಲಿ. ಆದರೆ ಅವನು ಅವುಗಳ ಹೊರತು ಬೇರೇನನ್ನಾದರೂ ಬಯಸಿದರೆ, ಅಲ್ಲಾಹನ ಬಳಿ ಅವನು ವಂಚಕ ಅಥವಾ ಕಳ್ಳನೆನಿಸಿಕೊಳ್ಳುವನು.” (ಅಬೂದಾವೂದ್)

ಪ್ರವಾದಿವರ್ಯರು(ಸ) ಇಷ್ಟಕ್ಕೇ ನಿಲ್ಲಿಸಲಿಲ್ಲ, ಬದಲಾಗಿ, “ರಾಜ್ಯಪಾಲನು ತನ್ನ ಕುಟುಂಬದ ಕುರಿತಾಗಿ ಸಮಾಧಾನದಿಂದಿರಲಿ. ಅವನು ಬಿಟ್ಟು ಹೋಗುವ ಸಂಪತ್ತು ಅವನ ವಾರೀಸುದಾರರಿಗಾಗಿದೆ. ಇನ್ನು ಅವನು ಸಣ್ಣ ಮಕ್ಕಳನ್ನು ಬಿಟ್ಟು ಹೋಗಿದ್ದರೆ, ಅವರ ಸಂರಕ್ಷಣೆ ಮತ್ತು ಪೋಷಣೆಯ ಹೊಣೆ ಸರಕಾರದ ಮೇಲಿರುವುದು” ಎಂದೂ ಹೇಳಿದ್ದಾರೆ.

* * * * *

www.uzairfalahi.com